**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಮಳವಳ್ಳಿ**

ಸಿ.ಸಿ ನಂ:82/2017

ಪಿಡಬ್ಲ್ಯೂ: 1 ಸಿಡಬ್ಲ್ಯೂ: 1

ಸಾಕ್ಷಿಯನ್ನು ತಾ:-**22.03.2022** ರಂದು ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ಮಾದಯ್ಯ |
| ತಂದೆಯ ಹೆಸರು | ಲೇಟ್ ಮಾದೇಗೌಡ |
| ವಯಸ್ಸು | 65 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಚನ್ನಪಿಳ್ಳೆಕೊಪ್ಪಲು ಗ್ರಾಮ |

**ಮುಖ್ಯ ವಿಚಾರಣೆ: ಶ್ರೀ ಸ.ಸ.ಅ ರವರಿಂದ**

1. ಚಾಸಾ-2 ನನ್ನ ಅಣ್ಣನ ಮಗ, ಚಾಸಾ-3 ನನ್ನ ಹೆಂಡತಿ, ಚಾಸಾ-4 ರಿಂದ 7 ನಮ್ಮ ಗ್ರಾಮಸ್ಥರು. ಆರೋಪಿಗಳು ಗೊತ್ತು ನನ್ನ ಸಂಬಂಧಿಕರು.

2. ದಿನಾಂಕ 12-10-2016 ರಂದು ನಮ್ಮ ಗ್ರಾಮ ಚನ್ನಪಿಳ್ಳೆಕೊಪ್ಪಲು ಗ್ರಾಮದಲ್ಲಿರುವ ನನ್ನ ಮನೆಯ ಎದುರಿಗೆ ನಾನು ಮತ್ತು ಚಾಸಾ-2 ರವರು ಖಾಲಿ ಜಾಗದಲ್ಲಿ ಕುಳಿತುಕೊಂಡಿರುತ್ತೇವೆ. ಆಗ ಸಮಯ 01-00 ರಿಂದ 01-30 ಆಗಿತ್ತು. ಆಗ ಆರೋಪಿಗಳು ಸರ್ವೆಯವರನ್ನು ಅಳತೆ ಮಾಡಲು ಕರೆಸಿರುತ್ತಾರೆ. ಆಗ ನಾನು ಮತ್ತು ಚಾಸಾ-2 ರವರು ಆರೋಪಿಗಳನ್ನು ಸದರಿ ಜಾಗ ನನ್ನದೆಂದು ಪ್ರಶ್ನೆ ಮಾಡಿರುತ್ತೇನೆ. ಆಗ ಆರೋಪಿಗಳು ಸದರಿ ಜಾಗ ನಮ್ಮದೆಂದು ಜಗಳ ತೆಗೆದು 1 ನೇ ಆರೋಪಿ ನನಗೆ ನೀಲಗಿರಿ ಮರದ ದೊಣ್ಣೆಯನ್ನು ತೆಗೆದುಕೊಂಡು ಬಲ ಮೊಣಕೈಗೆ ಮತ್ತು ಮಂಡಿಗೆ ಹೊಡೆದಿರುತ್ತಾರೆ. ಆ ನಂತರ ನಾನು ಕಿರುಗಾವಲು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಸಲ್ಲಿಸಲು ಹೋದಾಗ ಕಿರುಗಾವಲು ಪೊಲೀಸ್ ಠಾಣೆಯವರು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಳ್ಳಿ ಎಂದು ಹೇಳಿರುತ್ತಾರೆ. ಆ ನಂತರ ಮರುದಿನ ಬೆಳಿಗ್ಗೆ ದೂರನ್ನು ದಾಖಲು ಮಾಡಿರುತ್ತೇನೆ.

3. ಸಾಕ್ಷಿಗೆ ಈಗ ಎರಡು ದಾಖಲೆಗಳನ್ನು ತೋರಿಸಲಾಯಿತು ಸದರಿ ದಾಖಲೆಗಳಲ್ಲಿರುವ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ದೂರಾಗಿದ್ದು ಸದರಿ ದಾಖಲೆಯನ್ನು ನಿ.ಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು

ನಿ.ಪಿ-1 (ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಇನ್ನೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯು ಮಹಜರ್ ಆಗಿದ್ದು ಸದರಿ ದಾಖಲೆಯನ್ನು ನಿ.ಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು.

4. ಪೊಲೀಸರಿಗೆ ನಿ.ಪಿ-2 ನ್ನು ಬರೆಯಲು ನಾನೇ ಜಾಗ ತೋರಿಸಿರುತ್ತೇನೆ. ಸದರಿ ಸಮಯದಲ್ಲಿ ಪೊಲೀಸಿನವರು ಒಂದು ಹಿಡಿ ಗಾತ್ರದ ಮೂರು ಅಡಿ ಉದ್ದದ ನೀಲಗಿರಿ ದೊಣ್ಣೆ ಮತ್ತು ಎರಡು ಕಾಡುಕಲ್ಲುಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಸದರಿ ಒಂದು ಹಿಡಿ ಗಾತ್ರದ ಮೂರು ಅಡಿ ಉದ್ದದ ನೀಲಗಿರಿ ದೊಣ್ಣೆ ಮತ್ತು ಎರಡು ಕಾಡುಕಲ್ಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲು ಮಾಡಲು ಶ್ರೀ ಸ ಸ ಅ ರವರು ಅನುಮತಿಯನ್ನು ಕೋರುತ್ತಾರೆ. ಕಡತವನ್ನು ಪರೀಕ್ಷಿಸಲಾಗಿ ಸಾಕ್ಷ್ಷಿಯು ದೂರು, ಮಹಜರ್ ದಾರರಾಗಿದ್ದು ತನ್ನ ದೂರಿಗೆ, ಮತ್ತು ಮಹಜರ್ ಗೆ ವಿರುದ್ಧ ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಆದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು)

**<u>ಪಾಟೀಸವಾಲುಃ ಶ್ರೀ ಸ.ಸ.ಅ. ರವರಿಂದಃ</u>**

5. ದಿನಾಂಕ 11-10-2016 ರಂದು ಮದ್ಯಾಹ್ನ 01-00 ಗಂಟೆ ಸಮಯದಲ್ಲಿ 1 ನೇ ಆರೋಪಿಯು ನನ್ನ ಜೊತೆ ಜಗಳ ತೆಗೆದು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿ. ಆರೋಪಿ 2 ಮತ್ತು 3 ರವರು ನನಗೆ ಮತ್ತು ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅಲ್ಲೇ ಇದ್ದ ಕಲ್ಲುಗಳನ್ನು ತೆಗೆದುಕೊಂಡು ಚಾಸಾ-2 ರವರಿಗೆ ಎಡಗಣ್ಣು, ಬಲಗೈ ಮತ್ತು ಹಣೆಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ 3 ರವರು ಚಾಸಾ-2 ರವರಿಗೆ ತನ್ನ ಕೈಗಳಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ನಂತರ ಚಾಸಾ-3 ರವರು ಜಗಳ ಬಿಡಿಸಲು ಬಂದಾಗ ಆರೋಪಿಗಳು ಚಾಸಾ-3 ರವರ ಮುಂದಾಲೆ ಹಿಡಿದು ಎಳೆದಾಡಿ ಮಾನಕ್ಕೆ ಕುಂದುಂಡು ಮಾಡಿರುತ್ತಾರೆ ಎಂದರೆ ಸರಿ. ಆರೋಪಿಗಳು

ನನಗೆ ಮತ್ತು ಚಾಸಾ-2 ರವರಿಗೆ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಕೊಲೆ ಮಾಡುತ್ತೇವೆಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಕಾರಗಳು ಇಲ್ಲದ್ದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಿಂದ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ